# ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

ಸಿ.ಸಿ ನಂಃ 596/2020

ಸಿಡಬ್ಲ್ಯೂಃ 9 ಪಿಡಬಲ್ಲ್ಯೂಃ 4

ಹೆಸರುಃ ಡಾಃ ರೂಪಾ ಜಯಪ್ರಕಾಶ.

ತಂದೆ ಹೆಸರುಃ ಜಯಪ್ರಕಾಶ.

ವಯಸ್ಸುಃ 50 ವರ್ಷಗಳು

ಉದ್ಯೋಗಃ ವೈದ್ಯಾಧಿಕಾರಿಗಳು, ಜಿಲ್ಲಾ ಆಸ್ಪತ್ರೆ ಕೋಲಾರ

ವಾಸಃ ಕೋಲಾರ

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 29-12-2025 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ನಾನು 2016 ರಿಂದ 2023 ರವರೆಗೆ ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ವೈದ್ಯಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನೆ.

ದಿಃ 16-07-2020 ರಂದು ಚಾಸಾ-1 ಮದ್ಯಾಹ್ನ 12-00 ಗಂಟೆಗೆ ಸಮಯದಲ್ಲಿ ಚಾಸಾ-1 ದೇವೇಂದ್ರ ಗಣಪತಿ ನಾಯ್ಕ ರವರು ಹಲ್ಲೆಯ ಹಿನ್ನೆಲೆಯಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ಬಂದಿರುತ್ತಾರೆ. ಅವರನ್ನು ಪರಿಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. Cut injury over scalp measuring 1-2 1.5 ಸೆಂ. ಮೀ ಇರುತ್ತದೆ.

Stapling done (2 staples)

ಸದ್ರಿ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಈ ಬಗ್ಗೆ ನಾನು ಗಾಯದ ಪ್ರಮಾಣಪತ್ರವನ್ನು ನೀಡಿದ್ದು ಸದ್ರಿ ಗಾಯಪ್ರಮಾಣದ ಪತ್ರದಲ್ಲಿರುವ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ-5 ಅದರಲ್ಲಿರುವ ತನ್ನ ಸಹಿಯನ್ನು ನಿ.ಪಿ-5(ಎ) ಎಂದು ಗುರುತಿಸಲಾಯಿತು.

ಈ ಮೇಲ್ಕಂಡ ಗಾಯಗಳ ು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಕತ್ತಿಯಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ ಸದರಿ ಗಾಯವು ನನ್ನ ಅಭಿಪ್ರಾಯದಲ್ಲಿ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ.

ದಿಃ 16-07-2020 ರಂದು ಚಾಸಾ-4 ಮದ್ಯಾಹ್ನ 12-00 ಗಂಟೆಗೆ ಸಮಯದಲ್ಲಿ ಚಾಸಾ-4 ಗಜಾನನ ಗಣಪತಿ ನಾಯ್ಕ ರವರು ಹಲ್ಲೆಯ ಹಿನ್ನೆಲೆಯಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ಬಂದಿರುತ್ತಾರೆ. ಅವರನ್ನು ಪರಿಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

No external injuries found at the time of my examination.

ಈ ಬಗ್ಗೆ ನಾನು  ಗಾಯದ ಪ್ರಮಾಣಪತ್ರವನ್ನು ನೀಡಿದ್ದು ಸದ್ರಿ ಗಾಯಪ್ರಮಾಣದ ಪತ್ರದಲ್ಲಿರುವ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ–6 ಅದರಲ್ಲಿರುವ ತನ್ನ ಸಹಿಯನ್ನು ನಿ.ಪಿ–6(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ  ಆರ್ ಆರ್ ಹೆಚ್ ವಕೀಲರಿಂದಃ</u>**

ಚಾಸಾ–1 ರವರಿಗೆ ನಿ.ಪಿ– 5 ರಲ್ಲಿ  ಚಾಸಾ–5 ರಲ್ಲಿ ನಮೂದಿಸಿದ ಗಾಯಗಳು ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಮೇಲಿನಿಂದ ಆಯ ತಪ್ಪಿ ನುರುಜು ಕಲ್ಲಿನ ಮೇಲೆ ಬಿದ್ದಾಗ ಆಗುವ ಸಂಭವ ಇರುತ್ತದೆ ಎಂದರೆ ಸರಿ.  ಚಾಸಾ–1 ಮತ್ತು 4  ರವರು ಸ್ವತಃ ಚಿಕಿತ್ಸೆಗೆ ಬಂದಿರುತ್ತಾರೆ. ಸದ್ರಿಯವರು ಚಸಾಸಾ–1 ಮತ್ತು 4 ರವರನ್ನು ಬೇರೆ  ವ್ಯಕ್ತಿ ಗುರುತಿಸಿರುವುದಿಲ್ಲ. ನಿ.ಪಿ– 5 ಮತ್ತು 6 ರಲ್ಲಿ  ಚಾಸಾ–1 ಮತ್ತು 4 ರವರು ಹೇಳಿದ್ದರಿಂದ  ಅವರ ಹೇಳಿಕೆ ಆಧಾರದ ಮೇಲೆ ಚಾಸಾ–1 ಮತ್ತು 4 ರವರು ಹಲ್ಲೆಯ ಹಿನ್ನೆಲೆಯಲ್ಲಿ ಬಂದಿರುವುದಾಗಿ ಗಮನಿಸಿರುತ್ತೇನೆ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**